ನ್ಯಾಯಾಧೀಶರು ಹೇಳಿದರು: 'ನನ್ನ ಪ್ರಕಾರ ಭಾರತೀಯ ಸಂವಿಧಾನ ಪ್ರತಿಯೊಬ್ಬ ಪ್ರಜೆಯ ಸತ್ಯಾಗ್ರಹದ ಹಕ್ಕಿಗೆ ರಕ್ಷಣೆ ಒದಗಿಸುತ್ತದೆ.'

ಮುಂದೊಮ್ಮೆ ಈ ವಿಶೇಷಾಧಿಕಾರ ಕಾಯ್ದೆ ರದ್ದಾಯಿತು. ಲೋಹಿಯಾರಂಥ ಅನೇಕ ಬುದ್ಧಿಜೀವಿಗಳು ಕಾಲಕಾಲಕ್ಕೆ ಸರಿಯಾದ ಪ್ರಶ್ನೆಗಳನ್ನು ಎತ್ತುತ್ತಲೇ ಕಾನೂನಿನ ಲೋಪದೋಷಗಳನ್ನು ಬಯಲಿಗೆಳೆಯುತ್ತಿದ್ದರು; ಅವುಗಳನ್ನು ಸರಿಪಡಿಸಲು ಹೋರಾಡುತ್ತಿದ್ದರು. ಈ ಪರಂಪರೆ ಇಂದು ಕೂಡ ಮುಂದುವರಿಯುತ್ತಿದೆ.

ಎರಡು ತಿಂಗಳ ನಂತರ ಲೋಹಿಯಾ ಸೆರೆಮನೆಯಿಂದ ಹೊರಬಂದರು. 1500 ಸತ್ಯಾಗ್ರಹಿಗಳೂ ಬಿಡುಗಡೆಯಾದರು. 'ಎರಡು ತಿಂಗಳ ಅನ್ಯಾಯದ ಸೆರೆಮನೆವಾಸದಿಂದ ನಾನು ಸುಟ್ಟು ಕರಕಲಾಗಿದ್ದೇನೆ. ನನ್ನ ಮನಸ್ಸು ಸಿಟ್ಟು, ಅನುಕಂಪಗಳ ನಡುವೆ ಹೊಯ್ದಾಡುತ್ತಿದೆ' ಎಂದರು ಲೋಹಿಯಾ.

ತಾವು ಪಿಎಸ್‌ಪಿಯ ಕಾರ್ಯದರ್ಶಿ ಸ್ಥಾನಕ್ಕೆ ರಾಜಿನಾಮೆ ಕೊಟ್ಟ ಹಿನ್ನೆಲೆಯನ್ನು ನಂತರದ ಸಭೆಯೊಂದರಲ್ಲಿ ವಿವರಿಸುತ್ತಾ ಲೋಹಿಯಾ ಹೇಳಿದರು:

'ಭಾರತದಲ್ಲಿ ಮಾನವ ಜೀವಕ್ಕೆ ಬೆಲೆಯೇ ಇಲ್ಲ. ಇಲ್ಲಿನ ಜನರು ಪ್ರಾಣಿಗಳೋ ಮನುಷ್ಯರೋ ನನಗಂತೂ ಅರ್ಥವಾಗುತ್ತಿಲ್ಲ. ಇದೆಲ್ಲದರ ಹಿಂದೆ ಜಾತಿಪದ್ಧತಿ ಇದೆ. ಈ ಸಮಾಜಕ್ಕೆ ಅಸ್ಪೃಶ್ಯರು ಮನುಷ್ಯರಂತೆಯೇ ಕಾಣುವುದಿಲ್ಲ... ಭಾರತದ ಸಮಸ್ತ ಜನರ ಅನ್ನ, ನೀರುಗಳ ಸಮಸ್ಯೆಯನ್ನು ಬಗೆಹರಿಸಲು ಇಪ್ಪತ್ತು ವರ್ಷ ಬೇಕಾಗಬಹುದು. ಆದರೆ ಮನುಷ್ಯ ಜೀವಕ್ಕೆ ಗೌರವ ಕೊಡುವುದು ಈಗಿಂದೀಗಲೇ ಆರಂಭವಾಗಬೇಕು.'

ಈ ನಡುವೆ ಕಾಂಗ್ರೆಸ್ ಪಿಎಸ್‌ಪಿ ಸರ್ಕಾರಕ್ಕೆ ಕೊಟ್ಟಿದ್ದ ಬೆಂಬಲವನ್ನು ಹಿಂತೆಗೆದುಕೊಂಡಿತು. ಸರ್ಕಾರ ಕುಸಿದು ಬಿತ್ತು. ಅಶೋಕ ಮೆಹ್ತಾ ಮೊದಲಾದವರು ಕಾಂಗ್ರೆಸ್ ಜೊತೆಗಿನ ಸಹಕಾರ ಮುಂದುವರಿಸಿದರು. ಹಲವು ಅಹಿತಕರ ಬೆಳವಣಿಗೆಗಳ ನಡುವೆ ಲೋಹಿಯಾ ನೇತೃತ್ವದಲ್ಲಿ 1956ರ ಜನವರಿ 1ರಂದು ನವತರುಣರ ಸಮಾಜವಾದಿ ಪಕ್ಷ ಅಸ್ತಿತ್ವಕ್ಕೆ ಬಂತು. ಲೋಹಿಯಾ ಮೇಲೆ ಹೆಚ್ಚಿನ ಹೊಣೆ ಬಿತ್ತು. ಸಮಾಜವಾದಿ ಪಕ್ಷವನ್ನು ಎಲ್ಲ ಬಗೆಯ ಅನ್ಯಾಯಗಳ ವಿರುದ್ಧ ನಿಲ್ಲುವ ಪಕ್ಷವನ್ನಾಗಿ ಕಟ್ಟಲು ದೇಶಾದ್ಯಂತ ಹೊಸ ತರುಣ ತರುಣಿಯರು ಲೋಹಿಯಾ ಜೊತೆಗೂಡಿದರು.

ಜಾತೀಯತೆ ಹಾಗೂ ಅಸ್ಪೃಶ್ಯತೆಗಳ ವಿರುದ್ಧ ಸಮಾಜವಾದಿ ಪಕ್ಷದ ಮೂಲಕವೂ ಲೋಹಿಯಾ ಯುದ್ಧ ಸಾರಿದ್ದರು. ಆದರೆ ಇವುಗಳ ವಿರುದ್ಧ ನಿರ್ಣಾಯಕ ಯುದ್ಧ ಆರಂಭಿಸಿ ಬಹು ದೂರ ಸಾಗಿದ್ದ ಅಂಬೇಡ್ಕರ್ ಚಿಂತನೆಗಳ ಪರಿಚಯ ಲೋಹಿಯಾಗೆ ಕೊಂಚ ತಡವಾಗಿ ಆದಂತಿದೆ. ಜಾತಿಪದ್ಧತಿ ಹಾಗೂ ಅಸ್ಪೃಶ್ಯತೆಯ ನಿವಾರಣೆಯ ಬಗ್ಗೆ ಈ ಇಬ್ಬರೂ ಖಚಿತ ನಿಲುವು ತಾಳಿದ್ದರು. ದಮನಿತರಿಗೆ ಆದ್ಯತೆಯ ಮೇಲೆ ಅವಕಾಶ ಕೊಡುವ ಮೀಸಲಾತಿಯ ಬಗೆಗೂ ಇಬ್ಬರೂ ಒಂದೇ ರೀತಿ ಯೋಚಿಸುತ್ತಿದ್ದರು.

ಅಂಬೇಡ್ಕರ್, ಲೋಹಿಯಾ ಇಬ್ಬರೂ 'ಜಾತಿಯು ಚಲನೆಯಿಲ್ಲದ ವರ್ಗ; ವರ್ಗವು ಚಲನೆಯುಳ್ಳ ಜಾತಿ' ಎಂಬುದನ್ನು ಗುರುತಿಸಿದ್ದರು. ಭಾರತೀಯ ಸಮಾಜದ ಮೇಲೆ ಸವರ್ಣೀಯರ ಹಿಡಿತವನ್ನು ಹಿಮ್ಮೆಟ್ಟಿಸಲು ಇಬ್ಬರೂ ಹೋರಾಡುತ್ತಿದ್ದರು. ಭಾರತ ಜಾತ್ಯತೀತವಾಗದಿದ್ದರೆ ನಾಶ ಖಚಿತ ಎಂದು ಇಬ್ಬರೂ ಸ್ಪಷ್ಟವಾಗಿ ಹೇಳುತ್ತಿದ್ದರು. ಇಬ್ಬರೂ ಪ್ರವಾಹದ ವಿರುದ್ಧ ಈಜುವ ಧೀಮಂತರಾಗಿದ್ದರು. 1955ರ ಹೊತ್ತಿಗೆ, ಅಂಬೇಡ್ಕರ್ ಚಿಂತನೆ–ವ್ಯಕ್ತಿತ್ವಗಳನ್ನು ಕುರಿತು ಲೋಹಿಯಾ ಚುನಾವಣಾ ಸಭೆಗಳಲ್ಲೂ ಮಾತಾಡತೊಡಗಿದ್ದರು.

ಈ ನಡುವೆ ಲೋಹಿಯಾ ಹಾಗೂ ಸಂಗಾತಿಗಳು 'ಮ್ಯಾನ್‌ಕೈಂಡ್' ಎಂಬ ಮಾಸಿಕದ ಪ್ರಕಟಣೆ ಶುರು ಮಾಡಿದ್ದರು. 'ಅನ್ಯಾಯ ಯಾವ ಗುಹೆಯಲ್ಲಿದ್ದರೂ 'ಮ್ಯಾನ್‌ಕೈಂಡ್' ಅದನ್ನು ಬೇಟೆಯಾಡಬೇಕು' ಎಂದು ಲೋಹಿಯಾ ಪತ್ರಿಕೆಯ ಉದ್ದೇಶವನ್ನು ವಿವರಿಸಿದ್ದರು. ಪತ್ರಿಕೆಯನ್ನು ಅಂಬೇಡ್ಕರ್‌ಗೆ ಕಳಿಸುತ್ತಾ 10 ಡಿಸೆಂಬರ್ 1955ರಂದು ಲೋಹಿಯಾ ಬರೆದ ಪತ್ರದ ಭಾಗಗಳು:

ಡಿಯರ್ ಡಾ. ಅಂಬೇಡ್ಕರ್,

'ಮ್ಯಾನ್‌ಕೈಂಡ್' ಪತ್ರಿಕೆ ಜಾತಿಸಮಸ್ಯೆಯನ್ನು ಸಮಗ್ರವಾಗಿ ಬಿಚ್ಚಿಡಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತದೆ. ಪತ್ರಿಕೆಗೆ ನಿಮ್ಮಿಂದ ಒಂದು ಲೇಖನ ಬಂದರೆ ತುಂಬ ಸಂತೋಷವಾಗುತ್ತದೆ. ವಸ್ತುಗಳನ್ನು ಆರಿಸಿಕೊಳ್ಳಲು ನೀವು ಸ್ವತಂತ್ರರು. ದೇಶದಲ್ಲಿ ಪ್ರಚಲಿತವಿರುವ ಜಾತಿಪದ್ಧತಿಯ ಯಾವುದಾದರೊಂದು ಮುಖವನ್ನು ನೀವು ಆಯ್ದುಕೊಂಡರೆ, ಭಾರತದ ಜನ ಬರಿ ಸಿಟ್ಟಿನಿಂದಷ್ಟೇ ಅಲ್ಲ, ದಂಗುಬಡಿದು ಕೂಡ ಚಿಂತಿಸುವಂತೆ ಮಾಡುವಂಥ ಏನನ್ನಾದರೂ ಬರೆಯಿರಿ ಎಂದು ಮನವಿ ಮಾಡಿಕೊಳ್ಳುತ್ತೇನೆ.

ಮಧ್ಯಪ್ರದೇಶದ ಚುನಾವಣಾ ಪ್ರಚಾರದ ಕಾಲಕ್ಕೆ ನಾನು ನಿಮ್ಮನ್ನು ಕುರಿತು ಮಾಡಿದ ಭಾಷಣಗಳನ್ನು ನನ್ನ ಜೊತೆಗೆ ಪ್ರವಾಸ ಮಾಡಿದ ನಿಮ್ಮ ಸಹಚರ ನಿಮಗೆ ತಿಳಿಸಿದನೋ ಇಲ್ಲವೋ ತಿಳಿಯದು. ಈಗಲೂ ಕೂಡ ಕೋಪ ಅನುಕಂಪದೊಡನೆ ಬೆರೆಯಬೇಕೆಂದೇ ಆಶಿಸುತ್ತೇನೆ; ಹಾಗೂ ನೀವು ಬರಿ ಪರಿಶಿಷ್ಟ ಜಾತಿಗಳಿಗಷ್ಟೇ ಅಲ್ಲ, ಇಡೀ ಭಾರತೀಯರ ನಾಯಕರಾಗಬೇಕೆಂದು ಬಯಸುತ್ತೇನೆ.'

ಈ ಪತ್ರದಲ್ಲಿ ಅಂಬೇಡ್ಕರ್ ಅವರನ್ನು ಸಮಾಜವಾದಿ ಪಕ್ಷದ ವಲಯ ಶಿಬಿರಕ್ಕೆ ಹಾಗೂ ಪಕ್ಷದ ಪ್ರಾರಂಭೋತ್ಸವಕ್ಕೆ ಲೋಹಿಯಾ ಆಹ್ವಾನಿಸಿದ್ದರು.

ಅನಂತರದ ಇವರಿಬ್ಬರ ನಡುವಣ ಪತ್ರ ವ್ಯವಹಾರದ ಬಗ್ಗೆ ಹೆಚ್ಚಿನ ಮಾಹಿತಿಗಳಿಲ್ಲ. ಇದಕ್ಕೂ ಮುನ್ನ 1952ರ ಸಾರ್ವತ್ರಿಕ ಚುನಾವಣೆಯಲ್ಲಿ ಕೆಲವೆಡೆ ಸಮಾಜವಾದಿ ಪಕ್ಷ ಹಾಗೂ ಅಂಬೇಡ್ಕರ್ ನಾಯಕತ್ವದ 'ಆಲ್ ಇಂಡಿಯಾ ಶೆಡ್ಯೂಲ್ಡ್ ಕ್ಯಾಸ್ಟ್ ಫೆಡರೇಶನ್' ನಡುವೆ ಒಪ್ಪಂದವಾಗಿದ್ದ ಸೂಚನೆಗಳಿವೆ. ಸಮಾಜವಾದಿ ಮತಗಳು ಫೆಡರೇಶನ್‌ಗೆ ವರ್ಗಾವಣೆಯಾಗಲಿಲ್ಲ ಎಂದು ಕೂಡ ಅಂಬೇಡ್ಕರ್ ಮುಂದೊಮ್ಮೆ ಹೇಳಿದರು.

1955ರಲ್ಲಿ ಲೋಹಿಯಾ ಅಂಬೇಡ್ಕರ್‌ಗೆ ಪತ್ರ ಬರೆದ ನಂತರದಲ್ಲಿ ಹೊಸ ಸಮಾಜವಾದಿ ಪಕ್ಷ ಆರಂಭವಾಯಿತು. ಅನಂತರ ಅಂಬೇಡ್ಕರ್ ಅವರಿಗೆ ಸಮಾಜವಾದಿ ಪಕ್ಷದ ರಾಜಕೀಯ ಕೋರಿಕೆಗಳು ಹೋದಂತಿದೆ. ಡಾ. ಅಂಬೇಡ್ಕರ್ ಕಾನ್ಪುರ ನಗರದ ಸಾಮಾನ್ಯ ಕ್ಷೇತ್ರದಿಂದ ಸಮಾಜವಾದಿ ಪಕ್ಷದ ವತಿಯಿಂದ ಲೋಕಸಭೆಗೆ ಸ್ಪರ್ಧಿಸಬೇಕೆಂದು ಕೋರಲು ಪಕ್ಷ ಆ ವರ್ಷ ತೀರ್ಮಾನಿಸಿತು.

ಈ ವಿವರ, ಲೋಹಿಯಾ ಸಂಗಾತಿಗಳಾದ ಗೋಸ್ವಾಮಿ ಹಾಗೂ ವಿಮಲ ಮೆಹ್ರೋತ್ರ ಲೋಹಿಯಾಗೆ ಬರೆದ ಪತ್ರದಲ್ಲಿದೆ. ಅಂಬೇಡ್ಕರ್ ಅವರಂಥ ದೊಡ್ಡ ನಾಯಕನನ್ನು ಮೀಸಲು ಕ್ಷೇತ್ರವಲ್ಲದೆ, ಸಾಮಾನ್ಯ ಕ್ಷೇತ್ರದಿಂದ ಸಮಾಜವಾದಿ ಪಕ್ಷದ ವತಿಯಿಂದ ಸ್ಪರ್ಧಿಸುವಂತೆ ಕೋರಿದ ಈ ಪ್ರಯತ್ನ ಚಾರಿತ್ರಿಕ ಮಹತ್ವದ್ದಾಗಿದೆ.

ಈ ಹಿನ್ನೆಲೆಯಲ್ಲಿ ಗೋಸ್ವಾಮಿ ಹಾಗೂ ಮೆಹ್ರೋತ್ರರನ್ನು ಅಂಬೇಡ್ಕರ್ ತಮ್ಮ ದೆಹಲಿಯ ಮನೆಗೆ ಆಹ್ವಾನಿಸಿದರು. ಅಂಬೇಡ್ಕರ್ ಅವರನ್ನು ಭೇಟಿ ಮಾಡಿದ ಮೇಲೆ ಗೋಸ್ವಾಮಿ–ಮೆಹ್ರೋತ್ರ ಲೋಹಿಯಾಗೆ ಬರೆದ 27.09.1956ರ ಪತ್ರದ ಭಾಗಗಳು:

'ಪ್ರೀತಿಯ ಡಾಕ್ಟರ್ ಸಾಹೇಬ್,

ನಾವು ದಿಲ್ಲಿಗೆ ಬಂದು ಡಾ. ಅಂಬೇಡ್ಕರ್ ಅವರನ್ನು ಕಾಣಬೇಕೆಂದು ನಮ್ಮ ಸ್ನೇಹಿತನೊಬ್ಬನ ಮೂಲಕ ಆಹ್ವಾನ ಬಂತು. ಈ ಸ್ನೇಹಿತ ಡಾ. ಅಂಬೇಡ್ಕರ್ ಅವರ ಅತ್ಯಂತ ನಂಬುಗೆಯ ಮನುಷ್ಯ. ಅವರನ್ನು ಕಾಣಲು ನಾವು ದಿಲ್ಲಿಗೆ ಹೋದೆವು. ಅವರೊಂದಿಗೆ ಎಪ್ಪತ್ತೈದು ನಿಮಿಷದವರೆಗೆ ಮಾತಾಡಿದೆವು. ನಾವು ವೈಯಕ್ತಿಕ ನೆಲೆಯಲ್ಲಿ ಭೇಟಿಗೆಂದು ಬಂದಿರುವುದಾಗಿ ಸ್ಪಷ್ಟಪಡಿಸಿದೆವು.

ನೀವು ದಿಲ್ಲಿಯಲ್ಲಿದ್ದರೆ ಡಾ. ಅಂಬೇಡ್ಕರ್ ನಿಮ್ಮನ್ನು ಕಾಣಲು ಇಚ್ಛೆ ಪಡುತ್ತಿರುವಂತಿದೆ. ಅವರಿಗೆ ವಯಸ್ಸಾಗುತ್ತಿದೆ, ಆರೋಗ್ಯ ಕೆಡುತ್ತಿದೆ. ಅವರು ಕೋಲೂರಿ ನಡೆದಾಡುತ್ತಿದ್ದರು. ಸಮಾಜವಾದಿ ಪಕ್ಷದ ಎಲ್ಲ ವಿವರಗಳನ್ನೊಳಗೊಂಡ ಪ್ರಕಟಣೆಗಳು ಹಾಗೂ 'ಮ್ಯಾನ್‌ಕೈಂಡ್'ನ ಎಲ್ಲ ಪ್ರತಿಗಳು ಅವರಿಗೆ ಬೇಕಾಗಿವೆ...

ಕಾನ್ಪುರ ನಗರದ ಸಾಮಾನ್ಯ ಕ್ಷೇತ್ರದಿಂದ ಸಂಸತ್ತಿನ ಚುನಾವಣೆಯಲ್ಲಿ ಸ್ಪರ್ಧಿಸಬೇಕೆಂದು ನಾವು ಅವರಿಗೆ ಮನವಿ ಮಾಡಿಕೊಂಡೆವು. ಈ ವಿಚಾರವನ್ನು ಅವರು ತಳ್ಳಿ ಹಾಕಲಿಲ್ಲ. ಅಖಿಲ ಭಾರತ ದೃಷ್ಟಿ ಇಟ್ಟುಕೊಂಡು ಅವರು ನಿಮ್ಮೊಡನೆ ಮಾತಾಡಬಯಸಿದರು... ಅವರು ಎ.ಐ.ಎಸ್.ಸಿ.ಎಫ್. ಬಗ್ಗೆ ಹೆಚ್ಚು ಒಲವಿರಿಸಿಕೊಂಡಂತೆ ತೋರಲಿಲ್ಲ... ನೆಹರೂ ಕುರಿತ ಸಂಗತಿಗಳ ಬಗ್ಗೆ ('ಮ್ಯಾನ್‌ಕೈಂಡ್'ನಲ್ಲಿ ಬಂದ 'ಸಿನಿಮಾ ಔಟ್‌ಫಿಟ್', 'ನಾಯಕನಿಗೆ ಸೇರಿದ ಪ್ರಭುತ್ವ' ಮುಂತಾದ ಲೇಖನಗಳ ಬಗ್ಗೆ) ಅವರು ಕುತೂಹಲ ತೋರಿದರು; ಈ ವಿಷಯಗಳಿಗೆ ಸೂಕ್ತ ಪ್ರಚಾರ ಸಿಗಬೇಕು ಎಂದರು. ದಿಲ್ಲಿಯಿಂದ ಇಂಗ್ಲಿಷ್